# ಗೋಮುಖ ಬದನೆ!

ದಸರಾ ಹಬ್ಬಕ್ಕೆ ಮೈಸೂರಿಗೆ ಹೋಗಿದ್ದೆ. ಗೆಳೆಯ ರವಿಯ ತೋಟಕ್ಕೆ ಹೋದಾಗ ಅಲ್ಲೊಂದು ಅಚ್ಚರಿ ಕಾದಿತ್ತು. ಸುಂದರವಾದ, ಆಕರ್ಷಕವಾದ ಗೋವಿನ ಮುಖ ಹೋಲುವ ಬದನೆ ಗಿಡವೊಂದರಲ್ಲಿದ್ದಿದ್ದು ಕಣ್ಣಿಗೆ ಬಿತ್ತು. ದಸರಾ ಸಮಯದಲ್ಲಿ ಮನೆ ಮನೆಯಲ್ಲಿ ಗೊಂಬೆ ಕೂಡಿಸುವರು. ಆದರೆ ಈ ಗಿಡದಲ್ಲಿ ಹಸುವಿನ ಗೊಂಬೆ ಕೂಡಿಸಿದಂತಹ ಮನಮೋಹಕ ದೃಶ್ಯ ನೋಡಿ ಕುತೂಹಲ ಹೆಚ್ಚಿತು. ಮುಟ್ಟಲು ಹೋಗಬೇಕೆನ್ನುವಷ್ಟರಲ್ಲಿ ಗೆಳೆಯ ಎಚ್ಚರಿಸಿದ. ಇದು ಗೋಮುಖ ಬದನೆ. ಯಾವ ಕೋನದಿಂದ ನೋಡಿದರೂ, ಹಸುವಿನ ಮುಖವನ್ನೇ ಹೋಲುತ್ತದೆ. ಇದು ನೋಡಲು ಬಲು ಸುಂದರ. ಆದರೆ ಹೊಟ್ಟೆಗೆ ಅಪಾಯಕಾರಿ. ತರಕಾರಿಯಾಗಿ ಉಪಯೋಗವಿಲ್ಲ. ಮಂಡಿನೋವಿಗೆ ಮತ್ತು ಕೆಲ ಚರ್ಮರೋಗಗಳಿಗೆ ಔಷಧವಾಗುವ ಗುಣವನ್ನು ಹೊಂದಿದೆ. ಈ ಬದನೆ ಒಂದು ಅಲಂಕಾರಿಕ ಬೆಳೆ ಎಂಬುದರಲ್ಲಿ ಎರಡು ಮಾತಿಲ್ಲ.

–ಡಾ. ಕರವೀರಪ್ರಭು ಕ್ಯಾಲಕೊಂಡ, ಬಾದಾಮಿ







ಹೆಣ್ಣು ಜೇಡವು ಮಿಲನದ ನಂತರ ಸಂಗಾತಿಯನ್ನೇ ತಿನ್ನುವುದರಿಂದ ಜೇಡವನ್ನು ಕಪ್ಪು ವಿಧವೆ ಎಂದು ಕರೆಯಲಾಗುತ್ತದೆ.

# ಕಪ್ಪು ವಿಧವೆ

ಪ್ರಕೃತಿಯಲ್ಲಿ ಹಲವಾರು ವೈವಿಧ್ಯದ ಕೀಟಗಳನ್ನು ನಾವು ನೋಡಿದ್ದೇವೆ. ಅದರಲ್ಲಿ ಈ ಚಿತ್ರದಲ್ಲಿ ಕಾಣುವ 'ಕಪ್ಪುವಿಧವೆ'ಯೂ ಒಂದು. 'ಥೆರಿಡಿಡೆ' ಕುಟುಂಬಕ್ಕೆ ಸೇರಿದೆ ಈ ಕೀಟವು 'ಲ್ಯಾಟ್ರೋಡೆಕ್ಟಸ್' ಕುಲದ ಜೇಡವಾಗಿದೆ. ನಮ್ಮ ಮನೆಯಲ್ಲಿ ಬಲೆ ಹೆಣೆದ ಈ ಜೇಡವು ನನ್ನ ಕ್ಯಾಮೆರಾ ಕಣ್ಣಿಗೆ ಸೆರೆ ಸಿಕ್ಕಿದೆ. ಅಂದಹಾಗೆ ನಾನು ಹವ್ಯಾಸಿ ಫೋಟೊಗ್ರಫಿಯಲ್ಲಿ ತೊಡಗಿಕೊಂಡಿದ್ದೇನೆ.

ಗಂಡು ಜೇಡವು ಕೇವಲ ಕಪ್ಪು ಬಣ್ಣವನ್ನು ಹೊಂದಿರುತ್ತದೆ ಇದರ ಗಾತ್ರ 3.6 ಮಿಲಿ ಮೀಟರ್. ಹೆಣ್ಣು ಜೇಡವು ಕಪ್ಪು ಹಾಗೂ ಹೊಟ್ಟೆಯ ಮೇಲೆ ಕೆಂಪು ಬಣ್ಣವನ್ನು ಹೊಂದಿರುತ್ತದೆ. ಇದು 8.13 ಮಿಲಿ ಮೀಟರ್ ಗಾತ್ರವನ್ನು ಹೊಂದಿರುತ್ತದೆ. ಹೆಣ್ಣು ಜೇಡದ ಮೊಟ್ಟೆ ಗಾತ್ರ 1.25 ಸೆಂಟಿ ಮೀಟರ್ ಇದ್ದು ಒಂದು ಬೇಸಿಗೆಯಲ್ಲಿ ಒಂಬತ್ತು ಮೊಟ್ಟೆಯ ಚೀಲಗಳನ್ನು ಉತ್ಪಾದಿಸುತ್ತದೆ. ಪ್ರತಿಯೊಂದು ಮೊಟ್ಟೆ ಚೀಲವು 100  400 ಮೊಟ್ಟೆ ಹೊಂದಿರುತ್ತವೆ. ಬಿಳಿ ಬಣ್ಣದ ಮೊಟ್ಟೆಯ ಚೀಲಗಳನ್ನು ಹೊಂದಿದ್ದು ಲೋಳೆಯ ದಾರದಂತಹ ರಚನೆಯಿಂದ ಮೊಟ್ಟೆಗಳನ್ನು ರಕ್ಷಿಸುತ್ತವೆ. ಸಾಮಾನ್ಯವಾಗಿ ಇಂತಹ ಜೇಡಗಳು ಇರುವೆಗಳನ್ನು, ಕೀಟಗಳನ್ನು ಬೇಟೆಯಾಡಿ ಭಕ್ಷಿಸುತ್ತವೆ. ಈ ಜೇಡಗಳು ಭಾರತ, ಅಮೆರಿಕ, ಕೆನಡದಲ್ಲಿ ಹೆಚ್ಚಾಗಿ ಕಂಡುಬರುತ್ತವೆ.

–ದೀಪಶ್ರೀ ಎಸ್., ಕೂಡ್ಲಿಗಿ

# ರೈಲು ಹಳಿ ಮೇಲೆ ಓಡುವ ಕಾರು!

ರೈಲು ಹಳಿಗಳ ಮೇಲೆ ಓಡುತ್ತಿದ್ದ ವಿವಿಧ ರೀತಿಯ ಕೋಚ್‌ಗಳನ್ನು ಅನೇಕರು ನೋಡಿರಬಹುದು. ಆದರೆ 'ರೈಲ್ ಕಾರು' ಬಹಳ ಅಪರೂಪದ ದೃಶ್ಯ.

1925ರಲ್ಲಿ ಇಂಗ್ಲೆಂಡ್‌ನಲ್ಲಿ ತಯಾರಾದ ಈ ಕಾರನ್ನು ಅಂದಿನ ಮೈಸೂರು ರೈಲ್ವೆ ಅಧಿಕಾರಿಗಳು ಇನ್‌ಸ್ಪೆಕ್ಟರ್ ಉದ್ದೇಶಕ್ಕೆ ಬಳಸುತ್ತಿದ್ದರು. ಇಂತಹ ಅನೇಕ ಅಪರೂಪದ ರೈಲ್ವೆ ವಸ್ತುಗಳ ಸುಂದರ ಸಂಗ್ರಹಾಲಯ ಮೈಸೂರಲ್ಲಿ ಇದೆ. ಇಲ್ಲಿಗೆ ಭೇಟಿ ನೀಡುವ ಎಲ್ಲರ, ವಿಶೇಷವಾಗಿ ಮಕ್ಕಳ ಜ್ಞಾನ ಹಾಗೂ ಆನಂದ ಹೆಚ್ಚಿಸುವುದು ಖಂಡಿತ.

–ರಮೇಶ್ ಬಿ.ಎಂ., ಬೆಂಗಳೂರು

